ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು
ನೂರ ನಲವತ್ತನೆಯ ಅಧಿವೇಶನ
ಬುಧವಾರ, ದಿನಾಂಕ : 18 ನೇ ಮಾರ್ಚ್, 2020

ಪೋಡಿ ದುರಸ್ಥಿ ಬಗ್ಗೆ

ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-

1173 (1562) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೇ :-

(ಅ) ಸರ್ಕಾರವು 2009ನೇ ಸಾಲಿನಲ್ಲಿ ನಮೂನೆ 1 ರಿಂದ 5 ಮತ್ತು ನಮೂನೆ 6 ರಿಂದ 10 ತಯಾರಿಸಿ ದರಖಾಸ್ತು ಪೋಡಿ

ಕೆಲಸ ನಿರ್ವಹಿಸಲು ಮಾರ್ಗಸೂಚಿಗಳನ್ನು ಹೊರಡಿಸಿದ್ದು ಈವರೆವಿಗೂ ಶೇ.20ರಷ್ಟು ರಾಮನಗರ ಜಿಲ್ಲಾ ವ್ಯಾಪ್ತಿಯಲ್ಲಿ ದರಖಾಸ್ತು ಪೋಡಿಯಾಗಿಲ್ಲದಿರುವುದಕ್ಕೆ ಕಾರಣಗಳೇನು ; (ವಿವರ ನೀಡುವುದು)

(ಆ) ಪೋಡಿ ಕೆಲಸ ನಿರ್ವಹಿಸಲು ಮೂಲ ಮಂಜೂರಾತಿ ಕಡತಗಳು ಲಭ್ಯವಿರುವುದಿಲ್ಲವೆಂಬ ಕಾರಣ ನೀಡಿ ಅಧಿಕಾರಿಗಳು ಪೋಡಿ ಕೆಲಸವನ್ನು ನಿರ್ವಹಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಮೂಲ ಮಂಜೂರಾತಿ ಕಡತಗಳು ಲಭ್ಯವಿಲ್ಲದಿದ್ದಲ್ಲಿ ಪೋಡಿ ಕೆಲಸವನ್ನೇ ನಿರ್ವಹಿಸುವುದಿಲ್ಲವೇ ಅಥವಾ ಪೋಡಿ ಕೆಲಸ ನಿರ್ವಹಿಸಲು ಸರ್ಕಾರವು ಏನಾದರೂ ನಿರ್ಣಯ ಕೈಗೊಂಡಿದೆಯೇ ;

(ಇ) ರಾಮನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲಾ ವ್ಯಾಪ್ತಿಯಲ್ಲಿ ದರಖಾಸ್ತು ಪೋಡಿ ಅಂದೋಲನದ ನಂತರ ದುರಸ್ಥಿಯಾದ ಜಮೀನುಗಳೆಷ್ಟು ;

(ಈ) ಏಕ ವ್ಯಕ್ತಿ ಪ್ರಕರಣದಡಿ ದರಖಾಸ್ತುಗೊಂಡ ಜಮೀನುಗಳೆಷ್ಟು ; ಇವುಗಳಲ್ಲಿ ಬಾಕಿ ಇರುವ ಪ್ರಕರಣಗಳೆಷ್ಟು ; ಇದಕ್ಕೆ ಇರುವ ನಿಯಮಾವಳಿಗಳೇನು ; ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? (ವಿವರ ನೀಡುವುದು)